# ಲೋಕಚರಿತೆಯರು

ಸ್ತ್ರೀಲೋಕ ಅನೂಹ್ಯವಾದುದು. ಇಂಥ ಸ್ತ್ರೀಯರಲ್ಲಿ ನಮ್ಮ ಗೌರವಕ್ಕೆ, ಪ್ರೀತಿಗೆ ಭಾಜನರಾಗುವ ಇಬ್ಬರು ಸ್ತ್ರೀಸಂಪನ್ನೆಯರೆಂದರೆ: ಒಬ್ಬಾಕೆ ಬುದ್ಧನ ಮಡದಿ ಯಶೋಧರೆ; ಇನ್ನೊಬ್ಬಳು ಲಕ್ಷ್ಮಣನ ಹೆಂಡತಿ ಊರ್ಮಿಳಾ. ಇಂಥವರು ಇನ್ನೂ ಅನೇಕರಿದ್ದಾರೆ. ಪ್ರತಿಯೊಂದು ಹೆಣ್ಣಲ್ಲೂ ಮಾತೃಸಂಹಿತೆ ಉಂಟು. ಒಬ್ಬ ಹೆಣ್ಣು ಮಗಳಾಗಿ, ತಾಯಾಗಿ, ಸಹಚರಿಯಾಗಿ, ಹಲವು ರೂಪಗಳಲ್ಲಿ ಜಗತ್ತನ್ನು ಪೊರೆಯುತ್ತಿದ್ದಾಳೆ, ಸಂರಕ್ಷಿಸುತ್ತಿದ್ದಾಳೆ.

## ಯಶೋಧರೆ

ಬೌದ್ಧಧರ್ಮದ ತ್ರಿಪಿಟಕಗಳಲ್ಲಿ ಯಶೋಧರೆ ಕಾಣಿಸಿಕೊಳ್ಳುತ್ತಾಳೆ. ಬುದ್ಧ ಭಗವಂತನು ಯಶೋಧರೆಯನ್ನು ಬಿಟ್ಟು ಹೋದಮೇಲೆ ಯಶೋಧರೆ ಮಗ ರಾಹುಲನೊಡನೆ ಹೇಗಿದ್ದಳು? ಅವಳ ಭಾವನೆಗಳು ಹೇಗಿದ್ದವು? ಆಕೆ ಶುದ್ಧೋಧನನ ಅರಮನೆಯಲ್ಲಿ ಏನು ಮಾಡುತ್ತಿದ್ದಳು? ಇದು ಪೂರ್ವಪ್ರಸಂಗ. ಅನಂತರ ಬುದ್ಧ ತನ್ನ ಶಿಷ್ಯರೊಡಗೂಡಿ 'ಕಪಿಲವಸ್ತು'ವಿಗೆ ಬಂದಾಗ ನಡೆದ ಸಂಗತಿಗಳನ್ನು ತ್ರಿಪಿಟಕಗಳು ವಿವರಿಸುತ್ತವೆ. ಇದು ಉತ್ತರ ಪ್ರಸಂಗ. ಬುದ್ಧನು ಕಪಿಲವಸ್ತುವಿಗೆ ಬಂದಾಗ ರಾಜ ಶುದ್ಧೋಧನ ಮಗನನ್ನು ಕಂಡನಷ್ಟೆ. ಅವನೀಗ ಸಿದ್ಧಾರ್ಥನಲ್ಲ, ಭಗವಾನ್ ಬುದ್ಧ. ರಾಜ ಶುದ್ಧೋಧನನ ಅರಮನೆಗೆ ಬಂದ. ಅರಮನೆಯ ಸದಸ್ಯರೆಲ್ಲರೂ ಪ್ರೀತಿಯಿಂದ ಬುದ್ಧನನ್ನು ಬರಮಾಡಿಕೊಂಡರು. ಆದರೆ, ರಾಹುಲನ ತಾಯಿ ಯಶೋಧರೆ ಹೊರಗೆ ಬರಲಿಲ್ಲ. ಶುದ್ಧೋಧನ ಹೇಳಿ ಕಳಿಸಿದಾಗ 'ನಾನು ಗೌರವಕ್ಕೆ ಅರ್ಹಳಾಗಿದ್ದರೆ ಸಿದ್ಧಾರ್ಥನೇ ನನ್ನಲ್ಲಿಗೆ ಬರಲಿ' ಎಂಬ ಉತ್ತರ ಬಂದಿತು.

ಗೌತಮಬುದ್ಧ ಯಶೋಧರೆಯ ಅಂತಃಪುರಕ್ಕೆ ಬಂದ. ಅವನೊಡನೆ ಬರುತ್ತಿದ್ದ ಶಿಷ್ಯರಾದ ಸಾರಿಪುತ್ತ ಮತ್ತು ಮೊಗ್ಗಲ್ಲಾನರಿಗೆ 'ನಾನು ಎಲ್ಲವುಗಳಿಂದ ಮುಕ್ತನಾಗಿದ್ದೇನೆ. ಆದರೆ, ಯಶೋಧರೆಯಿಂದ ನಾನಿನ್ನೂ ಮುಕ್ತನಾಗಿಲ್ಲ. ಆಕೆ ನನ್ನನ್ನು ಬಹಳ ದಿನಗಳಿಂದ ನೋಡಿಲ್ಲ. ಅವಳಿಗೆ ಅಪಾರ ದುಃಖವಾಗಿದೆ. ಆ ದುಃಖದಿಂದ ಆಕೆ ಬಿಡುಗಡೆಗೊಳ್ಳಬೇಕು. ಆಕೆ ನನ್ನನ್ನು ಮುಟ್ಟಿದರೆ, ನೀವು ತಡೆಯಬೇಡಿ' ಎಂದು ಶಿಷ್ಯರಿಗೆ ಹೇಳಿದ. ಬುದ್ಧ ದೂರದಲ್ಲಿ ಕುಳಿತು ಚಿಂತೆಯ ಸಮುದ್ರದಲ್ಲಿ ಮುಳುಗಿದ್ದ ಯಶೋಧರೆಯನ್ನು ಕಂಡ. ಆಕೆಯಿದ್ದ ಕೋಣೆಯನ್ನು ಒಳಹೊಕ್ಕ. ಯಶೋಧರೆ ಸಿದ್ಧಾರ್ಥನನ್ನು ಕಂಡಳು. ಅವಳ ಪ್ರೀತಿಪಾತ್ರೆ ಉಕ್ಕಿಹರಿಯಿತು. ತನ್ನೊಳಗೆ ಹುದುಗಿರುವ ಪ್ರೀತಿಯನ್ನು ಹತ್ತಿಕ್ಕಲಾರದೆ ಹೋದಳು. ಬುದ್ಧನತ್ತ ನೋಡಿದಳು. ಅಲ್ಲಿ ತಥಾಗತನನ್ನು ಕಂಡಳು. ಅವಳು ಕೂಡಲೇ ಬುದ್ಧನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ದುಃಖದಿಂದ ಅಳತೊಡಗಿದಳು. ಮಾವ ಶುದ್ಧೋಧನ ಅಲ್ಲಿದ್ದ. ಯಶೋಧರೆಗೆ ಸಂಕೋಚ ಆವರಿಸಿತು. ಎದ್ದುನಿಂತು ಸ್ವಲ್ಪದೂರದಲ್ಲಿ ಹೋಗಿ ಕುಳಿತುಕೊಂಡಳು. ಆಗ ಶುದ್ಧೋಧನನು ಗೌತಮಬುದ್ಧನ ಕ್ಷಮೆಕೇಳಿದ. ಆಕೆಯ ವರ್ತನೆ, ಗಾಢವಾದ ಪ್ರೀತಿಯಿಂದ ಹುಟ್ಟಿದೆಯೆಂದು ತಿಳಿಸಿದ. ಆಕೆಯು ಕಳೆದ ಏಳು ವರ್ಷಗಳಲ್ಲಿ ಸಿದ್ಧಾರ್ಥನನ್ನು ಅನುಸರಿಸಿದ್ದಾಳೆಂದೂ ಸಿದ್ಧಾರ್ಥ ತಲೆ ಬೋಳಿಸಿಕೊಂಡಾಗ ಯಶೋಧರೆಯೂ ತಲೆಬೋಳಿಸಿಕೊಂಡಳೆಂದೂ ಸುಗಂಧ ದ್ರವ್ಯ, ಆಭರಣಗಳನ್ನು ತೊಡುತ್ತಿಲ್ಲವೆಂದೂ ಮಣ್ಣಿನ ತಟ್ಟೆಯಲ್ಲಿ ನಿಯಮಿತ ವೇಳೆಯಲ್ಲಿ ಮಾತ್ರ ಊಟ ಮಾಡುತ್ತಿರುವಳೆಂದೂ ಶುದ್ಧೋಧನ ತಥಾಗತನಿಗೆ ತಿಳಿಸಿದ. ಯಶೋಧರೆಯದು ತಾತ್ಕಾಲಿಕ ಭಾವೋದ್ರೇಕದ ಭಾವನೆ ಆಗಿರಲಿಲ್ಲ. ಆಕೆಯ ಶೋಕವು ಅವ್ಯಕ್ತವಾಗಿತ್ತು ಮತ್ತು ಆಧ್ಯಾತ್ಮಿಕ ಅನುಭೂತಿಯಿಂದ ಕೂಡಿತ್ತು.

## ಊರ್ಮಿಳಾ

ವಾಲ್ಮೀಕಿ ರಾಮಾಯಣದ ಪಾತ್ರ ಕೋಲಾಹಲದಲ್ಲಿ ಊರ್ಮಿಳೆಯದು ಕೇವಲ ನಾಮಾಂಕಿತ. ಅವಳು ಲಕ್ಷ್ಮಣನನ್ನು ಮದುವೆ ಮಾಡಿಕೊಂಡು ಅಯೋಧ್ಯೆಗೆ ಬಂದಳಷ್ಟೆ. ಊರ್ಮಿಳೆ ಸೀತೆಯನ್ನು ಅನುಸರಿಸಿದ್ದಳು. ಇತ್ತ ಲಕ್ಷ್ಮಣ ರಾಮನ ಸಹಚರನಾಗಿಯೇ ಇದ್ದ. ಶ್ರೀರಾಮಚಂದ್ರನು ಕಾಡಿಗೆ ಹೋಗಬೇಕಾದಾಗ, ಲಕ್ಷ್ಮಣ ಅಣ್ಣನನ್ನು ಅನುಸರಿಸಿ ಹದಿನಾಲ್ಕುವರ್ಷ ಕಾಡಿಗೆ ಹೋದ. ಆದರೆ, ಊರ್ಮಿಳೆಯ ಗತಿ. ಆಕೆ ಅಯೋಧ್ಯೆಯಲ್ಲಿ ಹದಿನಾಲ್ಕುವರ್ಷ ಹೇಗೆ ಕಳೆದಳು? ಅವಳ ಮನಃಸ್ಥಿತಿ ಹೇಗಿತ್ತು? ಇವೆಲ್ಲಾ ಕವಿವಾಲ್ಮೀಕಿ ಮುನಿಗಳು ನಮ್ಮ ಊಹೆಗೆ ಬಿಡುತ್ತಾರೆ. ಊರ್ಮಿಳೆ ಕುರಿತು ಕವಿ ರವೀಂದ್ರರು ಬರೆದಿದ್ದಾರೆ. ಆಧುನಿಕ ಹಿಂದಿ ಸಾಹಿತ್ಯವು ಊರ್ಮಿಳೆಯ ಕಥನರೂಪಗಳನ್ನು ಧರಿಸಿದೆ. ವಿಶೇಷವಾಗಿ ಶ್ರೀ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ 'ತಪಸ್ಸಿದ್ಧಿ' ಎಂಬ ಭಾಗದಲ್ಲಿ ಊರ್ಮಿಳೆಯ ಸ್ವಭಾವ, ಆಕೆಯ ವ್ಯಕ್ತಿತ್ವ ಮನೋಜ್ಞವಾಗಿ ಚಿತ್ರಿತವಾಗಿದೆ. ಶ್ರೀರಾಮಲಕ್ಷ್ಮಣರು ನಂದಿಗ್ರಾಮದ ಬಳಿ ಬರುತ್ತಾರೆ. ಊರ್ಮಿಳೆ ಆಗ ಸರಯೂ ನದಿತೀರದ ಕುಟೀರದಲ್ಲಿ ತಪಸ್ವಿನಿಯಾಗಿರುತ್ತಾಳೆ. ತಂಗಿ ಮಾಂಡವಿಯು ಊರ್ಮಿಳೆಯ ಬಳಿಬಂದು ಲಕ್ಷ್ಮಣ ಬರುವ 'ವಾರ್ತೆ'ಯನ್ನು ಬಿತ್ತರಿಸುತ್ತಾಳೆ. ಆಗ ಊರ್ಮಿಳೆ 'ದೇವರ್ಗೆ ತಂದರೇನ್, ತಂಗೆ ವನವಾಸದಿಂ' ಎಂದು ಸಮಾಧಾನದ ಮನಸ್ಸಿನಿಂದ ಮರುನುಡಿಯುತ್ತಾಳೆ. ಈ ಮಾತು, ಮೌನದ ಆಳದಿಂದ ಹೊರಬರುತ್ತದೆ. ಮಾಂಡವಿಯು ಊರ್ಮಿಳೆಗೆ ತಪಸ್ವಿನಿ ವೇಷದಲ್ಲಿಯೇ ಲಕ್ಷ್ಮಣನನ್ನು ನೋಡಲು ಪ್ರಚೋದಿಸುತ್ತಾಳೆ. ಆಗ ಆಕೆ 'ಚೀ! ಕಡಲ್ಗಿದಿರ್ ಪನಿಗೇಂ ಪ್ರದರ್ಶನಂ... ತನ್ನ ತಾನ್ ಇಲ್ಲಗೈವುದೆ ಎಲ್ಲ ಸಾಧನೆ ಕೊನೆಯ ಗುರಿ' ಎಂದು ಬಿಡುತ್ತಾಳೆ. ಕುವೆಂಪು ಎಂಬತ್ತು ಸಾಲುಗಳಲ್ಲಿ ಊರ್ಮಿಳೆಯ ಮೌನವನ್ನೂ ಆಕೆಯ ಸೌಶೀಲ್ಯ ವರ್ತನೆಯನ್ನೂ ನಮ್ಮ ಕಣ್ಣಮುಂದೆ ತೆರೆದಿಡುತ್ತಾರೆ.

ಯಶೋಧರೆ ಗಂಡನಿಂದ ಪರಿತ್ಯಕ್ತಳಾದರೆ; ಊರ್ಮಿಳೆ ಹದಿನಾಲ್ಕು ವರ್ಷಗಳ ನಂತರ ಲಕ್ಷ್ಮಣನನ್ನು ಕೂಡುತ್ತಾಳೆ. ಆದರೆ, ಯಶೋಧರೆ ಏಳು ವರ್ಷಗಳ ನಂತರ ಸಿದ್ಧಾರ್ಥನನ್ನು ಕಾಣುತ್ತಾಳೆ. ಮುಂದೆ ಪಾರಿವ್ರಾಜ್ಯವನ್ನು ಪಡೆಯುತ್ತಾಳೆ. ಇವರಿಬ್ಬರ ಮೌನ, ಸಂಯಮ, ಸಂಸ್ಕೃತಿಶೀಲತೆ ನಮ್ಮ ಮನಸ್ಸಿನ ಪರದೆಯ ಮೇಲೆ ಶಾಶ್ವತವಾಗಿ ಉಳಿದುಬಿಡುತ್ತದೆ.

■ **ಪುರಂಜೀವಿ**

## ಮಾತೇ ಮುತ್ತು

- ಪ್ರೀತಿಯಿಂದಾಡಿದ ಪ್ರತಿಯೊಂದು ನುಡಿಯು ಸಿಡಿಲಿನಂತೆ ಪರಿಣಾಮಕಾರಿ.

  —ಸ್ವಾಮಿ ವಿವೇಕಾನಂದ

- ದುಡಿಮೆಯು ಅತ್ಯಂತ ಹೆಚ್ಚು ಬೆಲೆಬಾಳುವ ಬಂಡವಾಳ.

  —ಕಾರ್ಲ್ ಮಾರ್ಕ್ಸ್

- ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿದು ಬೀಳುವ ಭಯವಿರದು. ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ಹೊರತು ಕೊಂಬೆಯನ್ನಲ್ಲ.

  —ಕುವೆಂಪು

- ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ. ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳಬೇಡ.

  —ಸರ್ವಜ್ಞ

- ಜಾತಿಯನ್ನು ಕೇಳಬೇಡಿ, ಹೇಳಬೇಡಿ ಮತ್ತು ಅದರ ಬಗ್ಗೆ ಚಿಂತಿಸಲೂಬೇಡಿ.

  —ನಾರಾಯಣ ಗುರು

- ಪ್ರೇಮ ಐಶ್ವರ್ಯದೊಂದಿಗೆ ಸಾಯುತ್ತದೆ.

  —ಹಾರ್ವೆ

- ಶ್ರಮಜೀವಿಯಂತೆ ಕೆಲಸ ಮಾಡು. ವೇದಾಂತಿಯಂತೆ ಯೋಚಿಸು.

  —ಹೆನ್ರಿ ಬರ್ಗ್

- ಗುಣಾತ್ಮಕವಾಗಿ ಯೋಚಿಸುವುದಿಲ್ಲ ಎಂದಾದಲ್ಲಿ ನೀವು ಕನಿಷ್ಠ ಪಕ್ಷ ಸುಮ್ಮನಾದರೂ ಇರಿ.

  —ಜೋಯೆಲ್ ಆಸ್ಟಿನ್

- ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.

  —ಮಹಾತ್ಮ ಗಾಂಧಿ